8 ಶ್ರೀ ರುದ್ರೇಶಗೌಡ ವೈ.ಎನ್(ವಿಧಾನ ಸಭಾ ಸದಸ್ಯರು)
ಜಿ.ಜನಾರ್ಧನರೆಡ್ಡಿ(ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು)

ಅ) ಬೇಲೂರಿನ ಜಗತ್ ವಿಖ್ಯಾತಿಯ ಶ್ರೀ ಚನ್ನಕೇಶವಸ್ವಾಮಿ ಯಾತ್ರಿನಿವಾಸ ಇದೆಯೇ;

ಇಲ್ಲ ಆದಾಗ್ಯೂ ಬೇಲೂರಿನಲ್ಲಿ ಪ್ರವಾಸಿಗರಿಗಾಗಿ ಹೋಟೆಲ್ ಮಯೂರ ವೇಲಾಪುರ ಎಂಬ ವಸತಿ ಸೌಲಭ್ಯವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಮೂಲಕ ನಡೆಸಲಾಗುತ್ತಿದೆ, ಇತ್ತೀಚೆಗೆ ಇದನ್ನು ಉನ್ನತೀಕರಿಸಲಾಗಿದೆ.

ಆ) ಹಾಗಿಲ್ಲದಿದ್ದಲ್ಲಿ ಮಂಜೂರಾತಿ ದೊರೆಯದಿರುವುದಕ್ಕೆ ಕಾರಣಗಳೇನು;

ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಬೇರೆ ರಾಜ್ಯ, ಜಿಲ್ಲೆ ಹಾಗೂ ವಿದೇಶದಿಂದ ಇಲ್ಲಿಗೆ ಬರುವ ಪ್ರವಾಸಿಗರಿಗೆ ಅನಾನುಕೂಲವಾಗಿರುವುದು ನಿಜವಲ್ಲವೇ;

ವಿದೇಶಿ ಪ್ರವಾಸಿಗರನ್ನು ಗಮನದಲ್ಲಿಟ್ಟಿಕೊಂಡು ಅಂತರಾಷ್ಟ್ರೀಯ ಮಟ್ಟದ ವಸತಿ ಸೌಲಭ್ಯವನ್ನು ಬೇಲೂರಿನ ಯಗಚಿ ಜಲಾಶಯದ ಬಳಿ ಖರೀದಿಸಿರುವ 10 ಎಕರೆ ಜಮೀನಿನ ಪೈಕಿ 3 ಎಕರೆ ಜಮೀನಿನಲ್ಲಿ ನಿರ್ಮಿಸಲು ಇಲಾಖೆಯು ಕ್ರಮ ವಹಿಸಿರುತ್ತದೆ. ಉಳಿದ 7 ಎಕರೆ ಜಮೀನಿನಲ್ಲಿ ಖಾಸಗಿ ಸಹಭಾಗತ್ವದಲ್ಲಿ ಜಾಗತಿಕ ಮಟ್ಟದ ವಸತಿ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಅಂತರರಾಷ್ಟ್ರೀಯ ಮಟ್ಟದ ಹೋಟೆಲ್ ಯೋಜನೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಶೀಘ್ರದಲ್ಲೆ ಕಾಮಗಾರಿಯನ್ನು ಆರಂಭಿಸಲಾಗುವುದು. ಮಧ್ಯಮ ವರ್ಗದ ಪ್ರವಾಸಿಗರ ಅನುಕೂಲಕ್ಕಾಗಿ ವಸತಿ ಸೌಲಭ್ಯ ನಿರ್ಮಿಸಲು ಚನ್ನಕೇಶವ ದೇವಾಲಯದ ಹಿಂಭಾಗದಲ್ಲಿ ಖಾಸಗಿ ಜಮೀನನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.